ಸಂಪುಟ: ೨ ಸಂಚಿಕೆ: ೩ ಪುಟ: ೪ ಸೆಪ್ಟೆಂಬರ್ ೨೦೧೮
* ಆಂತರಿಕ ಪ್ರಸರಣಕ್ಕೆ ಮಾತ್ರ

ಅರಿವು ಶಾಲೆಯ ಮಾಸಪತ್ರಿಕೆ

# ಅಂಗಳ

ಮಾಹಿತಿ, ಜ್ಞಾನ, ಸೃಜನಶೀಲತೆಗೊಂದು ವೇದಿಕೆ

ಸಂಪಾದಕರು: ಡಾ.ಎಂ.ಸಿ.ಮನೋಹರ ಸಂಚಿಕೆ ಸಂಪಾದಕರು: ಸಿ.ಅರ್ಚನಾ
www.arivu.org | e-mail: info@arivu.org ೯೪೮೨೨ ೭೭೮೭೨



## ಸ್ವಾತಂತ್ರ್ಯ ಮನುಷ್ಯರಿಗೆ ಮಾತ್ರ ಸೀಮಿತವೇ?

‘ಸ್ವಾತಂತ್ರ್ಯ’ ಮನುಷ್ಯರಿಗೆ ಮಾತ್ರ ಸೀಮಿತವೇ? ಪ್ರಾಣಿ–ಪಕ್ಷಿ, ಗಿಡ–ಮರ, ನದಿ–ತೊರೆಗಳಿಗೆ ‘ಸ್ವಾತಂತ್ರ್ಯ’ ಬೇಡವೇ? ಅಷ್ಟಕ್ಕೂ ಪ್ರಕೃತಿಯ ‘ಸ್ವಾತಂತ್ರ್ಯ’ ಕಿತ್ತುಕೊಳ್ಳಲು ಮನುಷ್ಯರಿಗೆ ಅಧಿಕಾರ ಕೊಟ್ಟವರಾದರೂ ಯಾರು? ತನ್ನ ‘ಸ್ವಾತಂತ್ರ್ಯ’ ಕಸಿಯಲು ಮನುಷ್ಯ ಮುಂದಾದರೆ ಪ್ರಕೃತಿ ಸುಮ್ಮನಿರುತ್ತದೆಯೇ...?

ಆಗಸ್ಟ್ ೧೫ ರಂದು ಅರಿವು ಶಾಲೆಯಲ್ಲಿ ಆಯೋಜಿಸಿದ್ದ ೭೨ನೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಇಂತಹ ಪ್ರಶ್ನೆಗಳು ಎಲ್ಲರನ್ನೂ ಕಾಡತೊಡಗಿದವು. ಅದಕ್ಕೆ ಕಾರಣರಾದವರು ನಮ್ಮ ಶಾಲೆಯ ಪೋಷಕರಾದ ಡಾ.ಅಭಿಜಿತ್ ಅವರು.

**❖ಸ್ವಾತಂತ್ರ್ಯ ದಿನಾಚರಣೆಯಲ್ಲಿ ಕಾಡಿದ ಪ್ರಶ್ನೆ**
**❖ಅರಿವು ಶಾಲೆಯಲ್ಲಿ ಅರ್ಥಪೂರ್ಣ ಆಚರಣೆ**

ಅತಿಥಿಗಳು ಅಥವಾ ಗಣ್ಯರನ್ನು ಹೊರಗಿನಿಂದ ಆಹ್ವಾನಿಸದೆ, ಪೋಷಕರ ಪೈಕಿ ಒಬ್ಬರು ಮತ್ತು ಶಿಕ್ಷಕರ ಪೈಕಿ ಒಬ್ಬರನ್ನು ಆಹ್ವಾನಿಸಿ ರಾಷ್ಟ್ರೀಯ ಹಬ್ಬ ಅಥವಾ ನಾಡಹಬ್ಬ ಆಚರಣೆ ಮಾಡುವುದು ಅರಿವು ಶಾಲೆಯ ವಿಶೇಷತೆಗಳಲ್ಲಿ ಒಂದು. ‘ನಮ್ಮ ಜೊತೆಯಲ್ಲೇ ಇರುವವರ ವಿಶೇಷತೆಗಳನ್ನು ಗುರುತಿಸಿ, ಗೌರವಿಸುವುದನ್ನು ಕಲಿತಾಗ ಮಾತ್ರ ಇತರರನ್ನು ಗೌರವಿಸುವ ಗುಣ ನಮ್ಮಲ್ಲಿ ಬೆಳೆಯಲು ಸಾಧ್ಯ’ ಎಂಬ ನಂಬಿಕೆ ಮತ್ತು ಆಶಯವೇ ಇಂತಹ ನಿರ್ಧಾರ ಅಥವಾ ಆಚರಣೆಗೆ ಕಾರಣ. ಅಂತೆಯೆ, ಈ ವರ್ಷ ಸ್ವಾತಂತ್ರ್ಯ ದಿನಾಚರಣೆಗೆ ಡಾ.ಅಭಿಜಿತ್ ಹಾಗೂ ಶಿಕ್ಷಕಿ ಜಾಯ್ಲಿನ್ ಅವರು ಅತಿಥಿಗಳಾಗಿ ಆಗಮಿಸಿ, ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಡಾ.ಅಭಿಜಿತ್ ಅವರು, ‘ಸ್ವಾತಂತ್ರ್ಯ’ ಮನುಷ್ಯರಿಗಷ್ಟೇ ಅಲ್ಲ; ಸಕಲ ಜೀವಿಗಳಿಗೂ ಇದೆ. ಪ್ರಕೃತಿಯ ‘ಸ್ವಾತಂತ್ರ್ಯ’ ಕಸಿದುಕೊಳ್ಳಲು ಪ್ರಯತ್ನಿಸಿ ದರೆ, ಅದು ನಮ್ಮ ನಾಶಕ್ಕೆ ನಾಂದಿಯಾಗುತ್ತದೆ ಎಂಬ ಎಚ್ಚರಿಕೆಯ ಸಂದೇಶ ನೀಡಿದರು.

ಆಗಸ್ಟ್ ೧೫ ಬಂತೆಂದರೆ ಸಾಕು, ಭಾರತದ ಭೂಪಟ, ಬಾವುಟ, ಗಾಂಧೀಜಿಯ ಭಾವಚಿತ್ರ ಸಹಿತ ಮೊಬೈಲ್, ವಾಟ್ಸ್ಆ್ಯಪ್ ಅಥವಾ ಫೇಸ್‌ಬುಕ್‌ನಲ್ಲಿ ಒಂದು ಸಂದೇಶ ಹಾಕಿ, ‘ಹ್ಯಾಪಿ ಇಂಡಿಪೆಂಡೆನ್ಸ್ ಡೇ’ ಎಂದು ಹೇಳಿಬಿಟ್ಟು ಪ್ರವಾಸ, ನಿದ್ದೆ, ಸಿನಿಮಾ ಅಂಥೆಲ್ಲ ಕಾಲ ಕಳೆಯುವವರೇ ನಮ್ಮ ನಡುವೆ ಹೆಚ್ಚಾಗಿರುವ ಸಂದರ್ಭ ದಲ್ಲಿ ಡಾ.ಅಭಿಜಿತ್ ಅವರು ಎತ್ತಿದ ಪ್ರಶ್ನೆ ಆತ್ಮಾವಲೋಕನ ಮಾಡಿಕೊಳ್ಳುವಂತಿತ್ತು.

ನಮ್ಮ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಹಬ್ಬದಂತೆ ಆಚರಣೆ ಮಾಡಿದೆವು. ಅಂದು ಬೆಳಗ್ಗೆ ಬಾನಿನಲ್ಲಿ ಮೋಡ ಕವಿಯುವುದು, ನಡು ನಡುವೆ ಸೂರ್ಯ ಇಣುಕುವುದು ನಡೆದಿತ್ತು. ಸ್ವಲ್ಪ ಹೊತ್ತಿಗೆ ‘ತುಂತುರು ಇಲ್ಲಿ ನೀರ ಹಾಡು’ ಎಂದು ಪ್ರಕೃತಿ ಹೇಳುತ್ತಿತ್ತು. ಇಂತಹ ಸನ್ನಿವೇಶದ ನಡುವೆ ದೃಢ ನಿರ್ಧಾರ ಮಾಡಿ, ಶಾಲೆಯ ಹೊರಾಂಗಣದಲ್ಲೇ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದೆವು.

ಧ್ವಜಾರೋಹಣ ನಂತರ ಮಕ್ಕಳು ರಾಷ್ಟ್ರಗೀತೆ ಹಾಡಿದರು. ಅತಿಥಿಗಳ ಮಾತಿನ ಬಳಿಕ ‘ಎಲ್ಲರ ನೋವನು ಬಲ್ಲವನಾದರೆ’ ಶಿಕ್ಷಕರ ಗೀತಗಾಯನದ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭವಾದವು. ಪೂರ್ವ ಪ್ರಾಥಮಿಕ ಮಕ್ಕಳು ಬಿ.ಎ.ಸನದಿ ಅವರ ‘ಒಂದಾಗಿ, ಚೆಂದಾಗಿ ಇರೋಣ’ ಎಂಬ ಹಾಡು ಹಾಡಿದರು. ಹಿರಿಯ ಪ್ರಾಥಮಿಕ, ಪ್ರೌಢಶಾಲಾ ಮಕ್ಕಳು ಮತ್ತು ಪೋಷಕರು ಪ್ರತ್ಯೇಕ ಗುಂಪುಗಳಲ್ಲಿ ದೇಶಭಕ್ತಿ ಗೀತೆಗಳನ್ನು ಹಾಡಿದರು. ೧ ನೇ ಮತ್ತು ೨ನೇ ತರಗತಿ ಮಕ್ಕಳು ಭವ್ಯ ಭಾರತದ ಪರಂಪರೆಯಲ್ಲಿ ಉದಯಿಸಿದ ಮಹಾ ಪುರುಷರನ್ನು ನೆನಪಿಸುವಂತಹ ‘ದೇಶ ದೇಶ ದೇಶ ನನ್ನದು’ ಎಂಬ ಹಾಡಿಗೆ ನೃತ್ಯ ಪ್ರದರ್ಶನ ಮಾಡಿದರು. ಕಾಡುಪ್ರಾಣಿಗಳ ನಡುವೆ ಸ್ವಾತಂತ್ರ್ಯದ ಪರಿಕಲ್ಪನೆ ಬಿಚ್ಚಿಕೊಳ್ಳುವ ‘ಯಾರಿಗೆ ಬಂತು ಸ್ವಾತಂತ್ರ್ಯ? ಎಲ್ಲಿಗೆ ಬಂತು ಸ್ವಾತಂತ್ರ್ಯ?’ ಎಂಬ ನಾಟಕ, ನಮ್ಮ ಸವಲತ್ತುಗಳನ್ನು ನಾವೇ ಪಡೆದುಕೊಳ್ಳಬೇಕು. ಆಗಲೇ ಅದಕ್ಕೊಂದು ಅರ್ಥ ಎಂಬ ಸಂದೇಶ ನೀಡುವ ‘ಸ್ವಾತಂತ್ರ್ಯದ ಅಂತರ್ಜಾಲ’ ನಾಟಕ ಸಂವೇದನಾ ಶೀಲವಾಗಿದ್ದವು. ಈ ಎಲ್ಲ ಕಾರ್ಯಕ್ರಮಗಳಿಗೆ ಪಂ.ವೀರಭದ್ರಯ್ಯ ಹೀರೇಮಠ ಅವರು ಹಾರ್ಮೋನಿಯಂ ಸಾಥ್ ನೀಡಿದರು. ತಬಲದಲ್ಲಿ ಪರಮೇಶ್ವರ ಭಟ್ ಮತ್ತು ಕಾಜು, ನೃತ್ಯ ಮತ್ತು ಹಾಡು ಗಳಲ್ಲಿ ಶಿಕ್ಷಕರಿಯರಾದ ರಶ್ಮಿ, ಸುಮಾ, ಅಮೃತಾ, ನಾಟಕ ದಲ್ಲಿ ಶಾಲೆಯ ಸಂಯೋಜಕರಾದ ಬರ್ಟಿ ಒಲಿವೆರಾ, ಛಾಯಾಗ್ರಹಣದಲ್ಲಿ ಗುರುಪ್ರಸಾದ್ ನೆರವು ನೀಡಿದರು.



। ಎಂ.ಮಂಜುಳಾ, ಮುಖ್ಯಶಿಕ್ಷಕಿ

## ಸಂಪಾದಕೀಯ

ಆತ್ಮೀಯರೆ,
ಅರಿವು ಶಾಲೆಯ ೨೦೧೮–೧೯ ನೇ ಸಾಲಿನ ೩ ನೇ ಸಂಚಿಕೆ ಇದಾಗಿದೆ. 'ಅಂಗಳ' ಮಕ್ಕಳಲ್ಲಿ ಯೋಚನೆ, ಕಲ್ಪನೆ, ಜ್ಞಾನದ ಜತೆಗೆ ಬರವಣಿಗೆಯನ್ನೂ ಹೆಚ್ಚಿಸುತ್ತಿದೆ. ಕನ್ನಡದೊಂದಿಗೆ ಇಂಗ್ಲಿಷ್ ಮತ್ತು ಹಿಂದಿ ಭಾಷೆ ಗಳಲ್ಲೂ ಬರೆಯುವವರ ಸಂಖ್ಯೆ ಹೆಚ್ಚಾಗಿದೆ. ಅದರಲ್ಲೂ ಸಣ್ಣ ಮಕ್ಕಳೂ ಹೆಚ್ಚಾಗಿ ಬರೆಯುತ್ತಿರುವುದು ಖುಷಿಯಾಗುತ್ತಿದೆ.

* ಆಗಸ್ಟ್ ತಿಂಗಳಿನಲ್ಲಿ ನಮ್ಮ ಶಾಲೆಯ ಮಕ್ಕಳ ಈಜು ತರಬೇತಿ ಶಿಬಿರ ಯಶಸ್ವಿಯಾಗಿ ಸಮಾರೋಪ ಗೊಂಡಿದ್ದು, ಆಸಕ್ತ ಮಕ್ಕಳು ತರಬೇತಿ ಮುಂದುವರಿಸುತ್ತಿರುವುದು ಮೆಚ್ಚುಗೆಯ ಸಂಗತಿಯಾಗಿದೆ.
* ಪ್ರತಿ ವರ್ಷದಂತೆ ಈ ಬಾರಿ ಎಫ್ಎಸ್ಎಲ್ ವತಿಯಿಂದ ಜೆನಿಫರ್ ಮತ್ತು ಲೊರೆನಾ ಎಂಬ ವಿದೇಶಿ ವಿದ್ಯಾರ್ಥಿನಿಯರು ನಮ್ಮ ಶಾಲೆಗೆ ಸ್ವಯಂಸೇವಕರಾಗಿ ಬಂದು ಕಲಿಕಾ ವಾತಾವರಣಕ್ಕೆ ಸಹಾಯಕರಾಗಿದ್ದಾರೆ.
* ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಆಟ ಪ್ರಮುಖವಾದದ್ದು ಆ ದೃಷ್ಟಿಯಿಂದ ಶಾಲೆಯಲ್ಲಿ ವಾಲಿಬಾಲ್ ಪ್ರಾತ್ಯಕ್ಷಿಕಾ ಪಂದ್ಯವನ್ನು ಆಯೋಜಿಸಲಾಗಿತ್ತು. ಇದನ್ನು ನೋಡಿ ಶಿಕ್ಷಕರು, ಮಕ್ಕಳು ಮತ್ತು ಪೋಷಕರು ಆನಂದಿಸಿದೆವು.
* ಪ್ರೌಢಶಾಲಾ ಹಂತದ ಮಕ್ಕಳಿಗೆ ಚಿತ್ರಪಟ ರಾಮಾಯಣ ನಾಟಕ ತರಬೇತಿ ನಡೆಯುತ್ತಿದ್ದು, ಇದೇ ತಿಂಗಳ (ಸೆಪ್ಟೆಂಬರ್) ೧೮ರಂದು ಕಿರು ರಂಗಮಂದಿರದಲ್ಲಿ ಸಂಜೆ ಪ್ರದರ್ಶಿಸಲಿದ್ದಾರೆ.
* ಇದರೊಂದಿಗೆ, ಇದೇ ತಿಂಗಳ ೨೨ ರಂದು ವಿಷಯಾಧಾರಿತ ಅನುಭವ ಹಂಚಿಕೆಯಿದ್ದು, 'ಬಿದಿರು' ಸಂಬಂಧಿತ ಭೇಟಿ, ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರ ವಿನಿಮಯ, ವಸ್ತುಗಳನ್ನು ತಯಾರಿಸುವ ಪ್ರಾತ್ಯಕ್ಷಿಕೆಗಳ ಜತೆಗೆ, ಇತರ ಸಿದ್ಧತೆಗಳು ನಡೆಯುತ್ತಿವೆ.
* 'ಅಂಗಳ' ಸಂಚಿಕೆ ಸಂಪಾದಕಿಯಾಗಿ ಕೆಲಸ ಮಾಡಲು ನನಗೆ ಅವಕಾಶ ನೀಡಿದವರಿಗೆ ಹಾಗೂ ಲೇಖನಗಳನ್ನು ಕೊಟ್ಟ ಮಕ್ಕಳು, ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು, ಇವರೊಂದಿಗೆ 'ಅಂಗಳ' ವಿನ್ಯಾಸ ಮಾಡುವವರಿಗೂ ಧನ್ಯವಾದಗಳು.



। ಸಿ.ಅರ್ಚನಾ ಶಿಕ್ಷಕಿ,
ಸಂಚಿಕೆ ಸಂಪಾದಕಿ

### ಆಗಸ್ಟ್‌ನಲ್ಲಿ ಶಾಲೆಗೆ ಭೇಟಿ ನೀಡಿದ್ದವರು

೧. ಪುರುಷೋತ್ತಮ, ಎಸ್‌ವಿವಿಪಿ ಫಾರ್ಮ್, ಮೈಸೂರು
೨. ಪ್ರಸಾದ್, ಪ್ರಾಧ್ಯಾಪಕರು, ಮೈಸೂರು
೩. ಪಂ.ಗಣಪತಿಭಟ್ ಹಾಸಣಗಿ, ಹಿಂದೂಸ್ಥಾನಿ ಸಂಗೀತಗಾರರು, ಹುಬ್ಬಳ್ಳಿ
೪. ಅವಿನಾಶ್ ಸ.ಶತಮರ್ಪಣ, ರಂಗಭೂಮಿ ಮತ್ತು ಸಿನಿಮಾ ಕಲಾವಿದರು, ಶಿವಮೊಗ್ಗ
೫. ಎಸ್.ಕಿರಣ್, ಸ್ವಉದ್ಯೋಗಿ, ಹಿನಕಲ್, ಮೈಸೂರು
೬. ನಾದ, ಗಾಯಕರು, ಕಾರ್ಕಳ
೭. ಡಾ.ದಿಲೀಪ್. ಟಿ.ಆರ್., ಮೈಸೂರು

ನಾವು ಮೇಲುಕೋಟೆಗೆ ಬಸ್ಸಲ್ಲಿ ಹೋಗಿದ್ವಿ. ಹೋಗುವಾಗ ಕೆ.ಆರ್.ಎಸ್. ನೋಡಿದ್ವಿ. 'ಹೊಸ ಜೀವನ ದಾರಿ' ತೋಟದಲ್ಲಿ ಆಟ ಆಡಿದ್ವಿ. ಅಲ್ಲಿ ನವಿಲು ಇತ್ತು. ನಾವಲ್ಲಿ ಕುಣಿದಾಡಿದ್ವಿ. ಅಕ್ಕ–ತಂಗಿ ಕೊಳ ನೋಡಿದ್ವಿ. ನನಗೆ ಪ್ರವಾಸ ಇಷ್ಟ ಆಯ್ತು.
। ಜ್ಞಾನಿಕಾ ಹರೀಶ್ ೨ನೇ ತರಗತಿ



## ಮಕ್ಕಳಾಟವೇ ಚೆಂದ...

ಪುಟಾಣಿ ಮಕ್ಕಳೊಡನೆ ಆಟ–ಪಾಠವೇ ಚೆಂದ. ಇನ್ನು ಅವರೊಡನೆ, ಅವರಿಗೆ ಇಷ್ಟವಾದ ಸ್ಥಳಗಳಿಗೆ ಹೋಗುವುದೆಂದರೆ ಇನ್ನೂ ಚೆಂದ. ಅಂತೆಯೆ, ನಮ್ಮ ಶಾಲೆಯ ಪೂರ್ವ ಪ್ರಾಥಮಿಕ ತರಗತಿ ಮಕ್ಕಳೊಡನೆ ಶಿಕ್ಷಕರಿಯರಾದ ಸುಮನಾ, ರಶ್ಮಿ, ಸವಿತಾ ಹಾಗೂ ನಾನು ನಿವೇದಿತನಗರದ ಪಾರ್ಕಿಗೆ ಭೇಟಿ ನೀಡಿದ್ದೆವು. ಆ ಪಾರ್ಕಿನಲ್ಲಿ ಮಕ್ಕಳ ಮನೋರಂಜನೆಗಾಗಿ ಬಹಳಷ್ಟು ಆಟಿಕೆಗಳಿವೆ. ದೊಡ್ಡ ಉಯ್ಯಾಲೆಗಳು, ಬಣ್ಣ ಬಣ್ಣದ ಕುರ್ಚಿಯಂತಿರುವ ಆಕರ್ಷಣೀಯ ಬಾತುಕೋಳಿಗಳು, ಸುರುಳಿ ಸುತ್ತುವಂತಿರುವ ಜಾರುಬಂಡೆಗಳು... ಮಕ್ಕಳು ತೃಪ್ತಿಯಾಗುವಷ್ಟು ಆಡಿ ನಲಿದರು. ನಂತರ ತಾವೇ ತಂದಿದ್ದ ತಿಂಡಿ ತಿಂದು ಅಲ್ಲಿಯೇ ಇದ್ದ ಕೆಲವು ಗಿಡಗಳನ್ನು ಗುರುತಿಸಿ ಆನಂದಪಟ್ಟರು. ತೆಂಗಿನಮರ, ಸೀಬೆ, ರಂಗುಮಾಲಿ ಗಿಡದ ಹೂವು ಮತ್ತು ಬೀಜಗಳನ್ನು ನೋಡಿ ಆನಂದಿಸಿದರು.



। ಸುಧಾ ಗುಡಗಂಟಿ, ಶಿಕ್ಷಕಿ

## ಮೇಲುಕೋಟೆಯಲ್ಲಿ ನಲಿದಾಡಿದ ನವ್ವಾಲೆಗಳು



ಮಕ್ಕಳ ಸಂತಸದ ಕಲಿಕೆಯಲ್ಲಿ 'ಪ್ರವಾಸ' ಪ್ರಮುಖವಾದ ಭಾಗ. ಅಂತೆಯೆ, ಆಗಸ್ಟ್ ೧೬ ಮತ್ತು ೧೭ ರಂದು ೧ರಿಂದ ೩ನೇ ತರಗತಿ ಮಕ್ಕಳನ್ನು ಮೇಲುಕೋಟೆಗೆ ಕರೆದೊಯ್ಯಲಾಗಿತ್ತು. ಶಿಕ್ಷಕರಾದ ಚೇತನಾ, ಅರ್ಚನಾ, ಉಷಾ, ರಮೇಶ್ ಮತ್ತು ನಾನು ಪ್ರವಾಸದಲ್ಲಿ ಭಾಗಿಯಾಗಿದ್ದೆವು. ಮಕ್ಕಳು ಸಹಜವಾಗಿಯೇ ಅತ್ಯಂತ ಸಂತಸ ಮತ್ತು ಸಡಗರದಿಂದ ಪ್ರವಾಸಕ್ಕೆ ಹೊರಟರು. ಆ ವೇಳೆಗೆ ಸರಿಯಾಗಿ ಕೃಷ್ಣರಾಜಸಾಗರ ಅಣೆಕಟ್ಟೆ ಭರ್ತಿ ಆಗಿತ್ತು. ಆದ್ದರಿಂದ ಮೇಲುಕೋಟೆಗೆ ಹೋಗುವ ಮಾರ್ಗ ನಮ್ಮ ಮೊದಲ ಭೇಟಿ ಅದೇ ಆಗಿತ್ತು. ಕೆಆರ್‌ಎಸ್ ಬೇರೆಯ ಜಗತ್ತೇ ಎಂಬಂತೆ ಭಾಸವಾಯಿತು. ಮಕ್ಕಳು, ಶಿಕ್ಷಕರೆಲ್ಲರೂ ಆ ದೃಶ್ಯವನ್ನು ವಿಸ್ಮಯದಿಂದಲೇ ನೋಡಿ ಬೆರಗಾದೆವು. ಭೋರ್ಗರೆಯುತ್ತಿದ್ದ ಜಲರಾಶಿ ನೋಡುಗರ ಮನಸ್ಸು ಮತ್ತು ದೇಹಕ್ಕೂ ತಂಪೆರೆಯುತ್ತಿತ್ತು. ಮಕ್ಕಳು ಆ ದೃಶ್ಯವನ್ನು ನಿಬ್ಬೆರಗಾಗಿ ನೋಡಿ ಖುಷಿಪಟ್ಟರು. ಆ ಕ್ಷಣ ರೋಮಾಂಚನಕಾರಿಯೂ ಆಗಿತ್ತು. ಬಳಿಕ ನಮ್ಮ ಪ್ರಯಾಣ ಮುಂದುವರಿಯಿತು. ಮೇಲುಕೋಟೆಯ 'ಹೊಸ ಜೀವನ ದಾರಿ' ನಿಸರ್ಗವನ್ನೇ ತನ್ನ ತೆಕ್ಕೆಯಲ್ಲಿ ಇರಿಸಿಕೊಂಡಿರುವ ತಾಣವಾಗಿದೆ ಎನಿಸಿತು. ಅಲ್ಲಿ ಎಲ್ಲರೂ ವಿಶ್ರಮಿಸಿ, ಊಟ ಮುಗಿಸಿ ಕಾಲ್ನಡಿಗೆ ಮೂಲಕ ರಾಯಗೋಪುರ, ನಂತರ ಚೆಲುವನಾರಾಯಣಸ್ವಾಮಿ ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪದ ಸೊಬಗನ್ನು ವೀಕ್ಷಿಸಿದೆವು. ನಂತರ ಜನಸೇವಾ ಟ್ರಸ್ಟ್‌ನ ಸಂತೋಷಕೌಲಗಿ ಅವರು 'ಮಕ್ಕಳ ದತ್ತು ಸ್ವೀಕಾರ ಕೇಂದ್ರ'ಕ್ಕೆ ಭೇಟಿ ನೀಡಿದೆವು. ಸಣ್ಣ ಸಣ್ಣ ಅನಾಥ ಮಕ್ಕಳನ್ನು ನೋಡಿ ಎಲ್ಲರ ಕಣ್ಣಲ್ಲಿ ಕಂಬನಿ ತುಂಬಿಬಂತು. ಅಂತಹ ಮಕ್ಕಳ ಪಾಲನೆ ಮತ್ತು ಪೋಷಣೆ ಮಾಡುತ್ತಿರುವವರ ಬಗ್ಗೆ ಹೆಮ್ಮೆ ಎನಿಸಿತು. ರಾತ್ರಿ ಊಟ ಮುಗಿಸಿ ತೋಟದಲ್ಲೇ ತಂಗಿದೆವು. ಆಟ ಮತ್ತು ಕಥೆಯ ಮೂಲಕ ನಿದ್ದೆಗೆ ಜೋಗುಳವಾಡಿ ಎಲ್ಲರೂ ಮಲಗಿದೆವು. ಮರುದಿನ ಬೆಳಗಿನ ಜಾವ ಪಕ್ಷಿಗಳ ಕೂಗು, ಪ್ರಾಣಿಗಳ ಸದ್ದು ಮಕ್ಕಳನ್ನು ತಟ್ಟಿ ಎಬ್ಬಿಸಿದವು. ಚುಮುಚುಮು ಚಳಿಯಲ್ಲಿ ಮೇಲೆದ್ದು ಅಲ್ಲಿನ ಸುಂದರ ಪ್ರಕೃತಿಯನ್ನು ಕಣ್ತುಂಬಿಕೊಂಡರು. ಉಪಾಹಾರದ ನಂತರ ಖಾದಿ ನೇಯ್ಗೆ, ಯೋಗನರಸಿಂಹಸ್ವಾಮಿ ದೇವಾಲಯ ನೋಡಿಕೊಂಡು, ಅಕ್ಕ–ತಂಗಿ ಕೊಳದ ಬಗ್ಗೆ ಭಾಗ್ಯಮ್ಮ ಎಂಬುವರಿಂದ ಸ್ವಾರಸ್ಯಕರ ಕಥೆ ಕೇಳಿಕೊಂಡು ಶ್ರೀರಂಗಪಟ್ಟಣಕ್ಕೆ ತೆರಳಿದೆವು. ಅಲ್ಲಿ ಶ್ರೀ ರಂಗನಾಥಸ್ವಾಮಿ ದೇವಾಲಯ, 'ಕರ್ನಲ್' ಬೈಲಿನ ಕಾರಾಗೃಹ, ಟಿಪ್ಪುವಿನ ಸ್ಮಾರಕ ನೋಡಿಕೊಂಡು ಮೈಸೂರಿಗೆ ಹಿಂದಿರುಗಿದೆವು.





। ಎಂ.ಎಂ.ಮಹೇಶ್ವರಿ, ಶಿಕ್ಷಕಿ

# ಸ್ನೇಹಿತರ ಮಧ್ಯೆ ಜಂಭಕ್ಕಿಲ್ಲ ಜಾಗ

ಸ್ನೇಹಿತರೆ...

ನೀವೆಲ್ಲರೂ ಇತ್ತೀಚೆಗಷ್ಟೇ ಸ್ನೇಹಿತರ ದಿನವನ್ನು ಆಚರಿಸಿದ್ದೀರಲ್ಲವೆ? ನಿಮಗೆ ನಾನು ಒಂದು ಸ್ನೇಹಿತರ ಕಥೆ ಹೇಳುತ್ತೇನೆ...

ಒಂದಾನೊಂದು ಊರಿನಲ್ಲಿ ಅಂಜೂರದ ಮರ ಮತ್ತು ಗರಿಕೆ ಸ್ನೇಹಿತರಾಗಿದ್ದರು. ಇದ್ದಕ್ಕಿದ್ದಂತೆ ಒಂದಿನ ಅಂಜೂರದ ಮರಕ್ಕೆ ತುಂಬಾ ಜಂಭ ಬಂದಿತ್ತು. ಏಯ್ ಗರಿಕೆ, 'ನೀನು ಕೀಳು ನಾನು ಮೇಲು' ಎಂದು ಹೇಳಿತು. ಗರಿಕೆಗೆ ಇದರಿಂದ ತುಂಬಾ ಬೇಜಾರಾಯಿತು. ನೋಡುತ್ತಾ ನೋಡುತ್ತಾ ಒಂದು ದಿನ ಮರ ಕಡಿಯುವವರು ಬಂದೇ ಬಿಟ್ಟರು. ಅವರಿಗೆ ಅಂಜೂರದ ಮರ ಕಾಣಿಸಿತು. ಮರ ಕಡಿಯಲು ಹೋದ ಅವರ ಕಾಲಿಗೆ ಗರಿಕೆ ತಾಕಿತು. ಅವರು ಅದಕ್ಕೆ ನಮಸ್ಕಾರ ಮಾಡಿದರು. ಏಕೆಂದರೆ, ಅವರಿಗೆ ಗಣಪತಿಯೆಂದರೆ ಬಹಳ ಭಕ್ತಿ. ಮರ ಕಡಿಯಲು ಕೊಡಲಿ ಎತ್ತಿದ ಅವರಿಗೆ, 'ಬೇಡ ಬೇಡ ಅವನನ್ನು ಕಡಿಯಬೇಡ' ಎಂದು ಅಂಗಲಾಚುತ್ತಿರುವ ಒಂದು ಧ್ವನಿ ಕೇಳಿಸಿದ ಕಾರಣ ಕೊಡಲಿಯನ್ನು ಕೆಳಗಿಳಿಸಿ ತಿರುಗಿ ನೋಡಿದರೆ, ಆಶ್ಚರ್ಯ! ಗರಿಕೆ ಮಾತನಾಡುತ್ತಿತ್ತು. ಗರಿಕೆಯ ರೂಪದಲ್ಲಿರುವ ಗಣಪತಿಯೇ ಮರ ಕಡಿಯುವುದು ಬೇಡ ಎನ್ನುತ್ತಿರುವಾಗ ಮರ ಕಡಿಯುವುದು ಸರಿಯಲ್ಲ ಎಂದು ಭಾವಿಸಿ ಅವರು ಹೊರಟುಹೋದರು.

ಇದರಿಂದ ಅಂಜೂರದ ಮರಕ್ಕೆ ತುಂಬಾ ಖುಷಿಯಾಯಿತು. ಅವರಿಬ್ಬರ ಸ್ನೇಹ ಎಂದಿನಂತೆ ಮುಂದುವರಿಯಿತು.



**। ಎನ್.ಪುನೀತಾ, ೬ ನೇ ತರಗತಿ**

# ಹೊಸ ಶಾಲೆಯ ಹೊಸ ಅನುಭವ

ನನ್ನ ಹೆಸರು ಹಂಸಿಕಾ. ಇದರ ಅರ್ಥ ಸರಸ್ವತಿ. ನನಗೆ ಸರಸ್ವತಿ ಎಂದರೆ ಬಲು ಇಷ್ಟ. ಹೆಸರಿಗೆ ತಕ್ಕಹಾಗೆ ಈ ನನ್ನ ಹೊಸ ಅರಿವು ಶಾಲೆಯಿಂದ ನಮ್ಮನ್ನು ಮೊದಲ ಭೇಟಿಗಾಗಿ ಜಾನಪದ ವಸ್ತುಸಂಗ್ರಹಾಲಯಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ನೃತ್ಯ ಮಾಡುತ್ತಿರುವ ಸರಸ್ವತಿಯ ಮೂರ್ತಿಯನ್ನು ನೋಡಿ ತುಂಬಾ ಸಂತೋಷವಾಯಿತು. ಸೂತ್ರದ ಗೊಂಬೆ, ಹರಕೆ ಗೊಂಬೆಗಳು, ಹಿಡಂಬಿಯ ಕಿವಿಓಲೆ, ಕಲ್ಲಿನ ಆಯುಧಗಳು, ಗೊಂಬೆ ಮಂಟಪ, ಮರದ ರಥ ಮುಂತಾದ ವಸ್ತುಗಳು ನನ್ನನ್ನು ಆಕರ್ಷಿಸಿದವು. ಕೆಲವು ಮುಖವಾಡಗಳು ಇದ್ದವು. ಅದನ್ನು ನೋಡಿದಾಕ್ಷಣ ಸ್ವಲ್ಪ ಭಯವೆನಿಸಿತು. ಆ ಭಯ ಇದ್ದರೂ ನನ್ನ ಸಹಪಾಠಿಗಳ ಜೊತೆಗೆ ಹೋದ ಮೊದಲ ಅನುಭವ ನನಗೆ ತುಂಬಾ ತುಂಬಾನೇ ಖುಷಿ ಕೊಟ್ಟಿತು.



**। ಹಂಸಿಕಾ ನಾಯಕ್,**
**೫ ನೇ ತರಗತಿ**

# 'ಗಣೇಶ' ಸಂತೆಗೆ ಹೋಗಿದ್ದನು...



ಒಂದು ದಿನ ಗಣೇಶ ಸಂತೆಗೆ ಹೋದನು. ಎಲ್ಲರೂ ಅವನಿಗೆ ಕೈ ಮುಗಿದರು. ಆಗ ಅವನಿಗೆ ತುಂಬಾ ಖುಷಿ ಆಯಿತು. ಅವನು ಎಲ್ಲರಿಗೂ ದೊಡ್ಡ ಮನೆ ಕೊಟ್ಟನು. ಎಲ್ಲರೂ ಅವನಿಗೆ ಲಡ್ಡು, ಪುರಿಉಂಡೆ, ಚಕ್ಕುಲಿ, ಮೈಸೂರ್‌ಪಾಕ್, ರವೆಉಂಡೆ, ಜಿಲೇಬಿ, ಬೆಲ್ಲ ಕೊಟ್ಟರು. ಆಗ ಗಣೇಶನ ೧೦ ಹಾಡುಗಳನ್ನು ಹಾಡಿದರು. ನಿಮ್ಮ ಮನೆಗೆ ಬಂದರೆ ತಿಂಡಿ ಕೊಟ್ಟು ಹಾಡು ಹೇಳುತ್ತೀರಾ ಅಲ್ವಾ?

**। ಅಪ್ರಮೇಯ,**
೨ನೇ ತರಗತಿ



# ಟೈರಿನೊಳಗೊಂದು ಸುತ್ತು



ನಮ್ಮ ಶಾಲೆಯಲ್ಲಿ ಮಕ್ಕಳಿಗೆ ಆಟವಾಡಲು ಮೈದಾನದಲ್ಲಿ ಜೋಕಾಲಿ, ಜಾರುಬಂಡೆಗಳ ಜತೆಗೆ ನಾಲ್ಕಾರು ಟೈರುಗಳಿವೆ. ಆವರಣದಲ್ಲಿ ಕಪ್ಪು ಚುಕ್ಕೆಯಂತೆ ಬಿದ್ದಿರುವ ಈ ಟೈರುಗಳನ್ನು ಮಕ್ಕಳ ಜತೆ ನೋಡಬೇಕು. ಪುಟಾಣಿಗಳಿಂದ ಹಿಡಿದು ದೊಡ್ಡ ಮಕ್ಕಳ ತನಕ ಅತ್ಯಂತ ಪ್ರೀತಿಯ ಆಟಿಕೆಗಳಾಗಿ ಪರಿಗಣಿಸಲ್ಪಟ್ಟಿವೆ. ಪುಟಾಣಿಗಳು ಉರುಳಿಸಿ, ಮಣ್ಣು ತುಂಬಿಸಿ ಧೂಳಿನ ಅಲೆ ನೋಡಿ ಖುಷಿಪಟ್ಟರೆ, ಕೆಲವರು ಅದರ ಮೇಲೆ ಕೂತು, ಎಳೆದು ಎಳೆಸಿಕೊಂಡು ನಲಿಯುತ್ತಾರೆ. ದೊಡ್ಡ ಮಕ್ಕಳು ಟೈರು ನಿಲ್ಲಿಸಿ, ಅದರ ಮೇಲೆ ತಾವು ನಿಂತು ಸಮತೋಲನ ಕಾಪಾಡಿಕೊಳ್ಳುತ್ತಾ ರೋಮಾಂಚಿತರಾಗುತ್ತಾರೆ. ಉಪಯೋಗಿಸಿ ಎಸೆದ ಟೈರುಗಳು ಮಕ್ಕಳ ನಗೆ ಅರಳಿಸಲು, ಉರುಳಿಸಲು ಸಮರ್ಥವಾಗಿವೆ. ಶಿಕ್ಷಣ ತಜ್ಞ ಜಿನನ್ ರವರ ಪ್ರಕಾರ, "ಸಿದ್ಧ ಆಟಿಕೆಗಳು ಮಕ್ಕಳ ಸೃಜನಶೀಲತೆಗೆ ಅಡ್ಡಿ; ಸಹಜ ಆಟಿಕೆಗಳು ಪೂರಕ". ಟೈರುಗಳು ಈ ಮಾತಿಗೆ ನಿದರ್ಶನವಾಗಿವೆ.



**। ಜೆ.ರಜನಿ, ಶಿಕ್ಷಕಿ**

# ದುಡಿಮೆಯ ನಂಬಿ ಬದುಕು

ಒಂದು ಊರಿನಲ್ಲಿ ಸೋಮಣ್ಣ ಎಂಬುವರು ಇದ್ದರು. ಅವರಿಗೆ ವಯಸ್ಸಾಗಿತ್ತು. ಚಪ್ಪಲಿ ಅಂಗಡಿ ಇಟ್ಟುಕೊಂಡಿದ್ದರು. ದಿನಾಲು ಬೆಳಗ್ಗೆ ೧೦ ಗಂಟೆಗೆ ಅಂಗಡಿ ತೆಗೆದು, ರಾತ್ರಿ ೯ ಗಂಟೆಗೆ ಮುಚ್ಚುತ್ತಿದ್ದರು. ಅವರಿಗೆ ಒಬ್ಬಳು ಮಗಳಿದ್ದಳು. ಅವಳಿಗೆ ೧೦ ವರ್ಷ ವಯಸ್ಸು. ಒಂದಿನ ಹಬ್ಬವಿತ್ತು. ಸೋಮಣ್ಣ ಅಂಗಡಿಗೆ ಹೋಗಿ, ಪೂಜೆ ಮುಗಿಸಿ ಅಂಗಡಿ ಮುಚ್ಚುವಾಗ ಮಗಳು ಅಳುತ್ತಾ ಬಂದಳು. ಸೋಮಣ್ಣ ಕೇಳಿದರು, ಏಕೆ ಅಳುತ್ತಿದ್ದೀಯಾ? ಆಗ ಅವಳು ಹೇಳಿದಳು, 'ನನಗೆ ಹೊಸ ಚಪ್ಪಲಿ ಕೊಡಿಸು'. ಸೋಮಣ್ಣ ಹೇಳಿದ, 'ಮಗಳೇ, ನನ್ನ ಬಳಿ ದುಡ್ಡಿಲ್ಲ'. ಅಂದಿನಿಂದ ಸೋಮಣ್ಣ ದುಡಿಮೆ ಹೆಚ್ಚು ಮಾಡತೊಡಗಿದರು. ಮಗಳಿಗೆ ಹಬ್ಬದ ದಿನವೆಲ್ಲ ಏನಾದರು ಕೊಡಿಸತೊಡಗಿದರು. ನಂತರ ಇಬ್ಬರೂ ಸಂತೋಷದಿಂದ ಬಾಳಿದರು.



**। ಅಧಿಶ್ರೀ ಮೊರಬದ,** ೨ನೇ ತರಗತಿ

# ಖುಷಿಗೆ ಮೂಲಮಂತ್ರ!



ಬಾಲ್ಯ ಜೀವನ ಅದೆಷ್ಟು ಸೊಗಸು
ಕ್ರೋಧ ಅಸೂಯೆ ಕಿಚ್ಚು ಇಲ್ಲದ ಮನಸು
ಕನಸುಗಳಿಗೆ ಇರಲಿಲ್ಲ ಎಲ್ಲೆ
ಓ ಗಗನವೇ ಇದ ನೀ ಬಲ್ಲೆ
ನಮಗಿರಲಿಲ್ಲ ಇತರರ ಹಂಗು
ತುಂಬಿಕೊಂಡಿತ್ತು ಜೀವನದ ರಂಗು
ಇದ್ದಾಗ ತಾಯಿಯ ಮಡಿಲಲ್ಲಿ
ಬೇಸರವು ನಮಗೆಲ್ಲಿ?
ಇದ್ದರೆ ಜತೆಯಲ್ಲಿ ಗೆಳೆಯರ ಬಳಗ
ಎಲ್ಲ ಮರೆಯುತ್ತಿದ್ದೆವು ನಾವಾಗ
ನಮ್ಮ ಮನಸ್ಸಿತ್ತು ಸ್ವತಂತ್ರ
ಅದೆಲ್ಲ ಆಗಿತ್ತು ನಮ್ಮ ಖುಷಿಗೆ
ಮೂಲಮಂತ್ರ!

**। ಕೆ.ಆರ್.ಗಾನಶ್ರೀ,**
೫ನೇ ತರಗತಿ



## The numbers

One day number nine bite number eight. Number eight asked "why did you bit me?".Number nine said "because I am big, you are small so I bit you". Next number eight bit number seven and said "I am big, you are small so I bit you". In the same way all the bigger numbers bite the smaller numbers. When one's turn came number one did not bite number Zero. Instead stood next to zero and they became number ten. Together, number ten bit all the numbers.



| **ANVITHA. K.R.** Class 7th

## Is it Human nature ?

Is it human nature to desire forbidden fruits to hunger for a blossom? So obsessed with passion that we forget the pain, which inevitably arises once we tease ourselves with the thought of it or taste a tiny part of it. It becomes the predator eating at us like a carnivore that saves the head for last savoring brain to freed its own and we still crave for illegal nectar enjoying the fact that it is consuming us greedily devouring.



| **Shreevalli,** Class 10th

## Science Museum Visit

29th august, 5th and 6th children went on a visit to Vishveshvarayya museum there ticket cost was Rs 50 per person. There were four floors. In the ground floor we went inside a section, there were so many science activities after that we went to another section it was as cold as space. It had astronaut models and things used in space. There was a big model of dish antenna. I liked a dinosaur model , it was moving and screaming. I liked ball maze, it was like when we turn the handle fast the ball will go up and there will be space to the ball to move. There was a rocket moved when we pressed a button. We had a nice day.



| **Arjun.G Rao.** Class 6th

## Tall Trees Play Volleyball

Children, staff and parents witnessed fantastic volleyball skills when the Mysore Volleyball Academy visited Arivu to demonstrate this sport. Most of the players were students of various colleges in Mysore. Overhead serving, precise passing and setting, aggressive spiking (smashing), blocking the spike, deft digging (receiving the ball) and crafty drop-placing were relished and fittingly applauded by the spell-bound spectators. Their tall physical features invited envious metaphors such as "Yentha maragalu!" (What tall trees) by the children! The children took active role in managing the microphone system, writing and announcing scores and retrieving the ball before it could hit the barbed fence. Earlier, while the visiting players were warming up, the staff and parents played a match displaying their own sporting enthusiasm. This evening's program also included presenting a tournament-standard Cosco molded volleyball as a memento, giving copies of the school magazine Angala and serving snacks to the visiting players.

A conversation between Dr. Manohar and a physical educator from his college days Dr. P. Krishnaiah, Director of Physical Education (In-charge), UoM, resulted in inviting of Dr. Dharmesh and his Mysore Volleyball Academy. While leaving, Dr. Dharmesh (also a guest lecturer at Yuvaraja's College and a certified national referee) offered to coach Arivu's promising high school students free-of-cost at the Banashankari park, Kuvempunagar, where they practice under floodlights – a space supported by formar Corporator Snake Shyam. With this event, a culture for playing and appreciating sports has received a boost at Arivu.



| **Bopanna,** Resource Person

## MY THOUGHTS ON ARIVU

Education is a gift. A gift that not everybody has access to. However, gaining education through your own experience, research and especially, your own interest, is even more valuable. This is the very reason I truly love the educational concept of Arivu school. A school that is unquestionably different from other, common schools and mainly focuses on learning by doing rather than learning the poem by heart without even knowing the history and reasoning it out. I personally think that not only experiences play a huge role, but also encouraging children in other activities and subjects they are found of and keen on studying. Through my first weeks in Arivu, I have learned to know that the school is highly committed into supporting children's creative ideas and giving them the space to do what they love. Plenty of the children get offered a chance where they can play a fictive character in their dramas, act it on stage in various festivals or even perform songs and traditional folk dance from Karnataka. Impressive! The school also offers craft courses that the majority truly enjoys! Up on that, I have recognized that almost all of the children are into painting, arts and constructing things on their own, which I appreciate and look forward to learning it for myself, too. For the future I would like to gain a deeper insight and spend more time with the children to also learn from them.






| **Jennifer Koenigsberger ,** German Volunteer

# The unexpected encounters

These stories are about the few unexpected encounters I had till now. I have read a lot of books and articles on wild life. Once I read an article about forest cane turtles. They were known to be extinct and were found in western Ghats. Last summer I was there in western Ghats, I was getting out of the vehicle and saw a small turtle disappearing into water. I was sure that it was a forest cane turtle which are rare and endangered.

The second was, I was in my house and the opposite school watchmen rushed to me and said that there was a cobra in the school. We went there and saw a rat snake, a huge one! I called Guru mama, he was way too far and Snake Shyam was not reachable. I took the task and caught the snake, bagged it and took it to my home. My mom was upset, she yelled "how dare you catch the snake without my permission? Are you going to become a snake catcher in your life?" My mom can be angry sometimes but she supports me in my interests more than anyone. Later, I took it to my school and showed it to all. It was a great experience. Another was I was on my way to school on cycle. At a crossing there were lot of people which was unusual. I went and saw a very fat Indian cobra with its hood open. I saw it clearly. It was shedding its Skin, meaning that it was leaving its exoskeleton. I want ahead and took a long stick and pulled it towards a bush. It was surely going to die, if I wasn't there. After all people weren't happy about it. Because they were unable to take selfie with the poor snake and some even wanted to kill the snake so that it won't return. Lastly, I was in Western Ghats and we kept seeing small sized snake which I had never seen before. When I came back I got to know that it was a Coral snake. They are highly venomous. After that I never touched an unknown animal. Some times nature needs a helping hand I am happy to give my both hands to it.



| **Amoghavarsha.M.** 10th Class